ಭಾಗಿಯಾಗಿದ್ದರು. ಆ ಸೂಫಿ ಕವಿಯನ್ನು ಇವರೆಲ್ಲರೂ ತಮ್ಮ 'ಶೇಖ್' ಎಂದು ಒಪ್ಪಿಕೊಂಡಿದ್ದರು. ಹಾಗೆಯೇ, ಸೂಫಿ ಕವಿಗಳು (ರಸ್ ಖಾನ್, ಬೀದಿಲ್, ರಹೀಮ್, ಇತ್ಯಾದಿ) ರಚಿಸಿದ 'ಪ್ರೇಮಾಖ್ಯಾನ್' ಎಂಬ ಕಾವ್ಯಪ್ರಭೇದವು ದೇಶೀ ನುಡಿಕಟ್ಟನ್ನು ಹಾಗೂ ದೇಶೀ ಗಾದೆಗಳನ್ನು ಒಳಗೊಂಡಿತ್ತು (ಹಾಲಿ, 91–94). ಪ್ರಸಿದ್ಧ ಮರಾಠಿ ಸಂತಕವಿ (13–14ನೆಯ ಶತಮಾನ) ನಾಮದೇವ್ ರಚಿಸಿದ ನೂರಾರು ಅಭಂಗಗಳಲ್ಲಿ ಒಂದು ಅಭಂಗವು ಹೀಗಿದೆ:

'ಬಾ, ದೇವರೆ, ಅಬ್ದುಲ್‌ನ ವೇಷವನ್ನು ಧರಿಸಿರುವ ಖಲಂದರ್!
ನಾಮದೇವನ ಒಡೆಯನು ಎಲ್ಲಾ ಹೃದಯಗಳನ್ನೂ ಪರೀಕ್ಷಿಸುವವನು,
ಮತ್ತು ಎಲ್ಲಾ ನಾಡುಗಳಲ್ಲಿಯೂ ಸಂಚರಿಸುವವನು.'

ಈ ಅಭಂಗದಲ್ಲಿ ಬರುವ 'ಖಲಂದರ್' ಮೂಲತಃ ಹಜ಼ರತ್ ಲಾಲ್ ಶಹಬಾಜ಼್ ಖಲಂದರ್ ಎಂಬ ಸೂಫಿ ಸಂತನ ಹೆಸರು; ಅನಂತರ ಅದು ಎಲ್ಲಾ ಸೂಫಿ ಸಂತರಿಗೂ ಅನ್ವಯವಾಯಿತೆಂದು ಕಾಣುತ್ತದೆ. 'ಅಬ್ದುಲ್' ಎಂದರೆ 'ದಾಸ', ಪರಮಾತ್ಮನ ದಾಸ. ನಾಮದೇವನ ಅಭಂಗಳ ಬಗ್ಗೆ ಹೇಳಬೇಕಾದ ಮತ್ತೊಂದು ಅಂಶವೆಂದರೆ, ಅವನು ರಚಿಸಿದ 80 ಅಭಂಗಗಳು ಸಿಖ್ಖರ ಪೂಜ್ಯ ಗ್ರಂಥವಾದ ಗ್ರಂಥ ಸಾಹಿಬ್‌ನಲ್ಲಿ ಸೇರ್ಪಡೆಯಾಗಿವೆ ಎಂದು ಸ್ವಾಮಿ ಹರ್ಷಾನಂದ ತಮ್ಮ 'ಹಿಂದೂ ವಿಶ್ವಕೋಶ'ದಲ್ಲಿ ದಾಖಲಿಸುತ್ತಾರೆ (2008).

ಅರ್ಥಾತ್, ಭಕ್ತಿಪಂಥವು ಭಾರತಾದ್ಯಂತ ಜಾತಿ–ಮತಗಳ ಗೋಡೆಗಳನ್ನು 'ದಾಟುವ' (crossovers) ಪ್ರಕ್ರಿಯೆಯ ಚೋದಕ ಶಕ್ತಿಯಾಗಿತ್ತು. ಈ ಬಗೆಯ 'ದಾಟುವಿಕೆ'ಯ ಪರಿಣಾಮವನ್ನು ಹಾಲಿ (ಆದಿತ್ಯ ಬೆಹ್ಲ್ ಎಂಬ ವಿದ್ವಾಂಸನು ಕಟ್ಟಿಕೊಟ್ಟ) 'Linked families of cultural practice' (ಸಾಂಸ್ಕೃತಿಕ ಆಚರಣೆಗಳು ಜೋಡಿಸಿದ ಕುಟುಂಬಗಳು) ಎಂಬ ಹೆಸರಿನಿಂದ ಗುರುತಿಸುತ್ತಾರೆ. ಎಂದರೆ, ಜಾತಿ–ಮತ–ಧರ್ಮಗಳನ್ನು ಮೀರಿ, ಸಮಾನ ಸಂಸ್ಕೃತಿಗಳ ಕಾರಣದಿಂದ ಅಸ್ತಿತ್ವಕ್ಕೆ ಬಂದ ಸಮುದಾಯಗಳು – ಕಬೀರ್, ದಾದು, ಬಾಣ್ವರೀ ಇತ್ಯಾದಿ ಪಂಥಗಳು, ವೈಷ್ಣವ ಧರ್ಮ ಮತ್ತು ಇಸ್ಲಾಮ್ ಇವೆರಡು ಮೂಲಗಳಿಂದ ಬಂದ ಸಮಾನ ಕಥನ–ಆಶಯಗಳು, ಪರಸ್ಪರ ಹೆಣೆದುಕೊಂಡಿದ್ದ ಸಂಗೀತ ಪರಂಪರೆಗಳು, ಹಿಂದೂ ಪರಿಕಲ್ಪನೆಗಳನ್ನು ಮತ್ತು ದೇವ–ದೇವತೆಗಳನ್ನು ಇಸ್ಲಾಮ್ ಚೌಕಟ್ಟಿನಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತಹ ವ್ಯಾಖ್ಯಾನಗ್ರಂಥಗಳು – ಇವೆಲ್ಲವೂ ಸೇರಿ ಹಿಂದೂ ಮುಸ್ಲಿಮ್ ಸಂಬಂಧಗಳ ಒಂದು ಸಂಕೀರ್ಣ ಜಾಲವನ್ನೇ ನಿರ್ಮಿಸಿದ್ದವು. ಈ ಜಾಲದ ಭಾಗಗಳೇ ರಾಮದಾಸ್, ಕಬೀರ್, ದಾದು ಮುಂತಾದ ರಾಮಭಕ್ತರು; ರಸ್ ಖಾನ್, ರಹೀಮ್, ಶೇಖ್ ಅಬ್ದುಲ್ ರಹಮಾನ್ ಚಿಸ್ತಿ ಮುಂತಾದ ಕೃಷ್ಣಭಕ್ತರು.

ಮತ್ತೊಂದು ಮಾತನ್ನು ಇಲ್ಲಿಯೇ ಹೇಳಿ ಮುಂದುವರೆಯಬಹುದು: ರಾಮದಾಸ್, ಪುರಂದರ ದಾಸ, ತ್ಯಾಗರಾಜ, ಮುಂತಾದ ರಾಮಭಕ್ತರಿಗೆ ಮತ್ತು ಕೃಷ್ಣಭಕ್ತರಿಗೆ ರಾಮ–ಸೀತೆಯರಾಗಲಿ, ಕೃಷ್ಣ–ರಾಧೆಯರಾಗಲಿ, ಅವರೆಲ್ಲರೂ ದೈವತ್ವಕ್ಕೇರಿದ ಮಾನವರೆ; ಮಾನವರಂತೆ ಹುಟ್ಟಿ, ಬದುಕಿ, ಈ ಲೋಕವನ್ನು ತ್ಯಜಿಸಿದವರು. ಅರ್ಥಾತ್, ರಾಮದಾಸ್, ಪುರಂದರ ದಾಸ, ತ್ಯಾಗರಾಜ, ಮುಂತಾದವರು 'ಸಗುಣ ಬ್ರಹ್ಮ' ಆರಾಧಕರು. ಆದುದರಿಂದ, ಸಂಕೇತಗಳಾದ ವಿಗ್ರಹಗಳ ಪೂಜಕರು. ಆದರೆ, ರಾಮಭಕ್ತ–ಕೃಷ್ಣಭಕ್ತ ಸೂಫಿ ಸಂತರಿಗೆ ರಾಮ–ಸೀತೆಯರ ಕಥೆಯಾಗಲಿ, ಕೃಷ್ಣ–ರಾಧೆಯರ ಕಥೆಯಾಗಲಿ, ಅವುಗಳು 'ಅನ್ಯೋಕ್ತಿ'ಗಳು. ಎಂದರೆ, ಆಧ್ಯಾತ್ಮಿಕ ತತ್ವಗಳ ರೂಪಕಗಳು. ಇವರುಗಳು 'ನಿರ್ಗುಣ ಬ್ರಹ್ಮ' ಆರಾಧಕರು; ಆ ಕಾರಣದಿಂದ ಇವರು ವಿಗ್ರಹಾರಾಧನೆಯನ್ನು ಒಪ್ಪದವರು. ಈ ಕವಿಗಳು ಭೌತಿಕ ಪ್ರೇಮವನ್ನು ಆಧ್ಯಾತ್ಮಿಕ ಪ್ರೇಮದ ರೂಪಕದಂತೆ ಪರಿಗಣಿಸುತ್ತಾರೆ; ಸೀತೆ/ರಾಧೆಯ ವಿರಹದ ದುಃಖ, ಮಿಲನದ ಹಂಬಲ, ಇತ್ಯಾದಿ ಭಾವಗಳು ಭಕ್ತನೊಬ್ಬನು/ಳು ಪರಮಾತ್ಮನೊಡನೆ ಒಂದಾಗಲು ಅನುಭವಿಸುವ ದುಃಖ, ಹಂಬಲ.

ಮುಂದಿನ ಭಾಗದಲ್ಲಿ ನಾನು ಪ್ರಾತಿನಿಧಿಕವಾಗಿ ಮೂವರು ಸೂಫಿ ಕೃಷ್ಣಭಕ್ತರಾದ ರಸ್ ಖಾನ್, ತಾಜ್ ಬೀಬಿ, ಮತ್ತು ಅಬ್ದುಲ್ ರಹೀಮ್ ಖಾನ್ ಅವರನ್ನು ಪರಿಚಯಿಸಿದ್ದೇನೆ.